# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 682 |
| ಸದಸ್ಯರ ಹೆಸರು | : | ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 25-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಕಳೆದ ಸಾಲಿನಲ್ಲಿ ಯಾವ ಯಾವ ಯೋಜನೆಗಳಿಗೆ ಹಜ್ ಮತ್ತು ವಕ್ಫ್ ಇಲಾಖೆಯಿಂದ ಎಷ್ಟು ಹಣ ನಿಗದಿ ಮಾಡಲಾಗಿದೆ. | **ಕರ್ನಾಟಕ ರಾಜ್ಯ ವಕ್ಫ್ ಮಂಡಳಿ**<br>2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಯೋಜನೆಗಳಿಗೆ ನಿಗಧಿ ಮಾಡಲಾದ ಅನುದಾನದ ವಿವರ "ಅನುಬಂಧ-1" ರಲ್ಲಿ ನೀಡಲಾಗಿದೆ.<br>**ಕರ್ನಾಟಕ ರಾಜ್ಯ ಹಜ್ ಸಮಿತಿ**<br>2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಹಜ್ ಸಮಿತಿಯ ನಿರ್ವಹಣೆ ಹಾಗೂ ಹಜ್ ಕ್ಯಾಂಪ್ ಆಯೋಜನೆಗಾಗಿ ರೂ.240.00ಲಕ್ಷಗಳ ಅನುದಾನವನ್ನು ರಾಜ್ಯ ಸರ್ಕಾರವು ನೀಡಿದ್ದು, ಬೆಂಗಳೂರಿನ ಹಜ್ ಭವನದ ನಿರ್ವಹಣೆ ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.250.00 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ. |
| ಆ. | ಕಳೆದ ಸಾಲಿನಲ್ಲಿ ಹಜ್ ಮತ್ತು ವಕ್ಫ್ ಇಲಾಖೆಯಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಸದರಿ ಹಣದಿಂದ ಇದುವರೆವಿಗೂ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; | **ಕರ್ನಾಟಕ ರಾಜ್ಯ ವಕ್ಫ್ ಮಂಡಳಿ**<br>2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ ಬಿಡುಗಡೆ ಮಾಡಿದ ಅನುದಾನದ ಹಾಗೂ ಫಲಾನುಭವಿಗಳ ವಿವರವನ್ನು "ಅನುಬಂಧ-2" ರಲ್ಲಿ ನೀಡಲಾಗಿದೆ.<br>**ಕರ್ನಾಟಕ ರಾಜ್ಯ ಹಜ್ ಸಮಿತಿ**<br>2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಹಜ್ ಸಮಿತಿಯ ನಿರ್ವಹಣೆ ಹಾಗೂ ಹಜ್ ಕ್ಯಾಂಪ್ ಆಯೋಜನೆಗಾಗಿ ರೂ.240.00ಲಕ್ಷಗಳ ಅನುದಾನವನ್ನು ರಾಜ್ಯ ಸರ್ಕಾರವು ನೀಡಿದ್ದು, ಹಾಗೂ ಬೆಂಗಳೂರಿನ ಹಜ್ ಭವನದ ನಿರ್ವಹಣೆ ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.250.00ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ.<br>ಕರ್ನಾಟಕ ರಾಜ್ಯ ಹಜ್ ಸಮಿತಿಯು ಹಜ್ ಯಾತ್ರೆಗೆ ಪ್ರಯಾಣ ಮಾಡಬಯಸುವ ಯಾತ್ರಿಕರ ಹಾಗೂ ಮುಂಬೈನ ಭಾರತೀಯ ಹಜ್ ಸಮಿತಿಯ ನಡುವೆ |

| | | |
|---|---|---|
| | | ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯ ಹಜ್‌ಸಮಿತಿಯ ವತಿಯಿಂದ ಪ್ರತಿ ವರ್ಷ ಹಜ್ ಯಾತ್ರಾರ್ಥಿಗಳು ತಮ್ಮ ಸ್ವಂತ ಹಣದಿಂದ ಹಜ್ ಯಾತ್ರೆಗೆ ಪ್ರಯಾಣ ಮಾಡುತ್ತಿದ್ದಾರೆ. 2019ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಹಜ್ ಸಮಿತಿಯ ವತಿಯಿಂದ 8337 ಯಾತ್ರಿಕರು ಹಜ್‌ಯಾತ್ರೆಗೆ ಪ್ರಯಾಣ ಮಾಡಿರುತ್ತಾರೆ. |
| ಇ | ಕಳೆದ ಸಾಲಿನಲ್ಲಿ ಹಜ್ ಮತ್ತು ವಕ್ಫ್ ಇಲಾಖೆಯಿಂದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ: (ಮಾಹಿತಿ ನೀಡುವುದು.) | <u>ಕರ್ನಾಟಕ ರಾಜ್ಯ ವಕ್ಫ್ ಮಂಡಳಿ</u><br>2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳನ್ನು ವಿವರ "ಅನುಬಂಧ-3" ರಲ್ಲಿ ನೀಡಲಾಗಿದೆ.<br><br><u>ಕರ್ನಾಟಕ ರಾಜ್ಯ ಹಜ್ ಸಮಿತಿ</u><br>2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಹಜ್ ಸಮಿತಿಯ ನಿರ್ವಹಣೆ ಹಾಗೂ ಹಜ್ ಕ್ಯಾಂಪ್ ಆಯೋಜನೆಗಾಗಿ ರೂ.240.00 ಲಕ್ಷಗಳ ಅನುದಾನವನ್ನು ರಾಜ್ಯ ಸರ್ಕಾರವು ನೀಡಿದ್ದು, ಹಾಗೂ ಬೆಂಗಳೂರಿನ ಹಜ್ ಭವನದ ನಿರ್ವಹಣೆಗಾಗಿ ಹಾಗೂ ಇತರ ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.250.00ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ. |
| ಈ | ಬಿಡುಗಡೆ ಮಾಡಿದ ಅನುದಾನದಲ್ಲಿ ಖರ್ಚಾಗಿರುವ ಮತ್ತು ಉಳಿದಿರುವ ಹಣವೆಷ್ಟು; ಯಾವ ಕಾರಣಕ್ಕೆ ಖರ್ಚಾಗದೇ ಉಳಿದಿದೆ? (ಸಂಪೂರ್ಣ ವಿವರ ನೀಡುವುದು.) | <u>ಕರ್ನಾಟಕ ರಾಜ್ಯ ವಕ್ಫ್ ಮಂಡಳಿ</u><br>ಬಿಡುಗಡೆ ಮಾಡಿದ ಅನುದಾನದಲ್ಲಿ ಸಂಪೂರ್ಣ ಖರ್ಚಾಗಿರುತ್ತದೆ.<br><br><u>ಕರ್ನಾಟಕ ರಾಜ್ಯ ಹಜ್ ಸಮಿತಿ</u><br>2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಹಜ್ ಸಮಿತಿಯ ನಿರ್ವಹಣೆ ಹಾಗೂ ಹಜ್‌ಕ್ಯಾಂಪ್ ಆಯೋಜನೆಗಾಗಿ ನೀಡಿರುವ ಅನುದಾನವು ಸಂಪೂರ್ಣವಾಗಿ ಬಳಕೆಯಾಗಿದ್ದು, 2019-20ನೇ ಸಾಲಿನಲ್ಲಿ ಬೆಂಗಳೂರಿನ ಹಜ್ ಭವನದ ನಿರ್ವಹಣೆ ಹಾಗೂ ಇತರೇ ಕಾಮಗಾರಿಗಳನ್ನು ಪೂರ್ಣಗೊಳಿಸಲು ನೀಡಿರುವ ಅನುದಾನದಲ್ಲಿ ರೂ.200.00 ಲಕ್ಷಗಳು ಖರ್ಚಾಗದೆ ಉಳಿದಿದ್ದು, ಹಜ್ ಭವನದ ಆಡಿಟೋರಿಯಂ ಹಾಗೂ ಇಂಟೀರಿಯರ್ ಕೆಲಸವನ್ನು ಪೂರ್ಣಗೊಳಿಸಲು ಈ ಮೊತ್ತವನ್ನು ಬಳಕೆ ಮಾಡಿಕೊಳ್ಳಲಾಗುವುದು. |

ಸಂಖ್ಯೆ: MWD 109 LMQ 2020

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ, ಹಜ್ ಮತ್ತು
ವಕ್ಫ್ ಸಚಿವರು

ಅನುಬಂಧ - 1

**2019-20 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಆಯವ್ಯಯದಲ್ಲಿ ನಿಗಧಿಪಡಿಸಲಾದ ಅನುದಾನದ ವಿವರ**

| ಕ್ರ.ಸಂ | ವಕ್ಫ್ ಸಂಸ್ಥೆಯ ವಿವರ | 2019-20 |
|---|---|---|
| | | ಆಯವ್ಯಯದಲ್ಲಿ ನಿಗಧಿಪಡಿಸಲಾದ ಅನುದಾನ (ರೂ.ಲಕ್ಷಗಳಲ್ಲಿ) |
| 1 | ಕರ್ನಾಟಕ ರಾಜ್ಯದಲ್ಲಿರುವ ಪೇಶ್ ಇಮಾಮ್ ಮತ್ತು ಮೌಜ್ಜನ್‌ಗಳಿಗೆ ಗೌರವಧನ | 5500.00 |
| 2 | ವಕ್ಫ್ ಸಂಸ್ಥೆಗಳ ರಿಪೇರಿ/ ಜೀರ್ಣೋದ್ಧಾರಕ್ಕೆ ಸಹಾಯಾನುದಾನ | 1000.00 |
| 3 | ಕರ್ನಾಟಕ ರಾಜ್ಯ ವಕ್ಫ್ ಆಸ್ತಿಗಳ ಸಂರಕ್ಷಣೆ | 2800.00 |
| 4 | ವಿಶೇಷ ಅನುದಾನ: ಪ್ರಮುಖ ಯಾತ್ರಾ ಸ್ಥಳಗಳ ಮೂಲಸೌಕರ್ಯಕ್ಕಾಗಿ ಅನುದಾನ | 200.00 |
| 5 | ಖಬರಸ್ತಾನ ಮೂಲಭೂತ ಸೌಕರ್ಯಕ್ಕಾಗಿ ಅನುದಾನ | 1000.00 |
| | ಒಟ್ಟು | 10500.00 |

ಅನುಬಂಧ - 2

2019-20 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಿಂದ ಬಿಡುಗಡೆಮಾಡಲಾದ
ಅನುದಾನದ ಹಾಗೂ ಫಲಾನುಭವಿಗಳ ವಿವರ

| ಕ್ರ.ಸಂ | ವಕ್ಫ್ ಸಂಸ್ಥೆಯ ವಿವರ | 2019-20 | |
|---|---|---|---|
| | | ಬಿಡುಗಡೆಮಾಡಲಾದ ಅನುದಾನದ ವಿವರ (ರೂ.ಲಕ್ಷಗಳಲ್ಲಿ) | ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ |
| 1 | ಕರ್ನಾಟಕ ರಾಜ್ಯದಲ್ಲಿರುವ ಪೇಶ್ ಇಮಾಮ್ ಮತ್ತು ಮೌಜನ್‌ಗಳಿಗೆ ಗೌರವಧನ | 6155.47 | 6244 ಪೇಶ್ಇಮಾಂ<br>6149 ಮೌಜನ್ಸ್ |
| 2 | ವಕ್ಫ್ ಸಂಸ್ಥೆಗಳ ರಿಪೇರಿ/ ಜೀರ್ಣೋದ್ಧಾರಕ್ಕೆ ಸಹಾಯಾನುದಾನ | 1212.00 | 437 ವಕ್ಫ್ ಸಂಸ್ಥೆಗಳು |
| 3 | ಕರ್ನಾಟಕ ರಾಜ್ಯ ವಕ್ಫ್ ಆಸ್ತಿಗಳ ಸಂರಕ್ಷಣೆ | 3123.75 | 633 ವಕ್ಫ್ ಸಂಸ್ಥೆಗಳು |
| 4 | ವಿಶೇಷ ಅನುದಾನ: ಪ್ರಮುಖ ಯಾತ್ರಾ ಸ್ಥಳಗಳ ಮೂಲಸೌಕರ್ಯಕ್ಕಾಗಿ ಅನುದಾನ | 268.05 | 31 ವಕ್ಫ್ ಸಂಸ್ಥೆಗಳು |
| 5 | ಖಬರಸ್ತಾನ ಮೂಲಭೂತ ಸೌಕರ್ಯಕ್ಕಾಗಿ ಅನುದಾನ | 542.50 | 52 ವಕ್ಫ್ ಸಂಸ್ಥೆಗಳು |
| | ಒಟ್ಟು | 11301.77 | |

Annexure - 3

| Works under the following Scheme Made by the Instituions | | |
|---|---|---|
| **For the Financial Year 2019-20** | | |
| Sl. No. | Scheme Name | Nature of Works |
| 1 | Protection of Wakf Property | Construction of Compound Wall to Khabrasthan, Idgah, Masjid, Dargah, Ashoorkhana, Chilla & Jhanda Katta |
| 2 | Repairs & Renovation | Repairs & Renovation of Masjid, Dargah, Ashoorkhana, Chilla & Jhanda Katta |
| 3 | Development of Khabrasthan | Construction of Ghusul Khana, Bathroom, Toilet, Security Room, Shed to Perform Last Rituals (Namaz e Janaza), High Mass Light, Borewell. |
| 4 | Special Grants | Construction of Musafir Khana, Extension of Masjid, Dargah, Idgah, Guest House for Pilgrims, Community Hall, Hostels. |